# ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ

ಕಾರ್ಖಾನೆಗಳು, ಬಾಯ್ಲರುಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯು ಕರ್ನಾಟಕ ಸರ್ಕಾರದ ಕಾರ್ಮಿಕ ಸಚಿವಾಲಯದ ಅಡಿಯಲ್ಲಿ ಮತ್ತು ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ ರವರ ಆಡಳಿತಾತ್ಮಕ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತದೆ. ಕಾರ್ಖಾನೆಗಳ ಕಾಯ್ದೆ, 1948 ರ ವ್ಯಾಪ್ತಿಗೆ ಒಳಪಡುವ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಸುರಕ್ಷತೆ, ಆರೋಗ್ಯ ಮತ್ತು ಕಲ್ಯಾಣವನ್ನು ಖಚಿತಪಡಿಸಲು ಕಾರ್ಖಾನೆಗಳ ಕಾಯ್ದೆ, 1948 ಮತ್ತು ಕರ್ನಾಟಕ ಕಾರ್ಖಾನೆಗಳ ನಿಯಮಾವಳಿಗಳು, 1969 ರ ನಿಬಂಧನೆಗಳನ್ನು ಜಾರಿಗೊಳಿಸುವುದು ಇಲಾಖೆಯ ಮುಖ್ಯ ಉದ್ದೇಶವಾಗಿದೆ. ಕಾರ್ಖಾನೆಗಳು, ಬಾಯ್ಲರ್ಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯು ಕಾರ್ಖಾನೆಗಳ ವಿಭಾಗ ಮತ್ತು ಬಾಯ್ಲರುಗಳ ವಿಭಾಗ ಎಂಬ ಎರಡು ವಿಭಾಗಗಳನ್ನು ಹೊಂದಿದೆ. ಇಲಾಖೆಯು ನಿಯತಕಾಲಿಕ ತಪಾಸಣೆ ಮತ್ತು ಹೊಸ ಬಾಯ್ಲರ್‌ಗಳ ನೋಂದಣಿ ಮತ್ತು ಅಸ್ತಿತ್ವದಲ್ಲಿರುವ ಬಾಯ್ಲರ್‌ಗಳ ಪ್ರಮಾಣಪತ್ರಗಳ ನವೀಕರಣ, ಭಾರತೀಯ ಬಾಯ್ಲರ್‌ಗಳ ಕಾಯಿದೆ, 1923 ಮತ್ತು ಭಾರತೀಯ ಬಾಯ್ಲರ್ ನಿಯಮಗಳು, 1950 ರ ಅಡಿಯಲ್ಲಿ ಬಾಯ್ಲರ್ ಮತ್ತು ಬಾಯ್ಲರ್ ಭಾಗಗಳ ತಯಾರಕರು, ದುರಸ್ತಿ ಮಾಡುವವರು ಮತ್ತು ಎರೆಕ್ಟರ್‌ಗಳ ನೋಂದಣಿ ಮತ್ತು ನವೀಕರಣವನ್ನು ಮಾಡುವ ಜವಾಬ್ದಾರಿಯನ್ನು ಹೊಂದಿರುತ್ತದೆ. ಇದು ಮೂಲತಃ ರೆಗ್ಯುಲೇಟರಿ ಇಲಾಖೆಯಾಗಿದ್ದು, ಪ್ರಸ್ತುತ ಪರಿಸರ ಮತ್ತು ಇಂದಿನ ಬೇಡಿಕೆಯನ್ನು ಪೂರೈಸಲು ಇಲಾಖೆಯು ಸೇವಾ ಪೂರೈಕೆದಾರರಾಗಿ ತನ್ನ ಸ್ವರೂಪವನ್ನು ಬದಲಾಯಿಸಿಕೊಂಡಿದೆ. ಆದರೆ ಅದು ಜಾರಿಗೊಳಿಸುವ ಶಾಸನಗಳ ಗುರಿ ಮತ್ತು ಉದ್ದೇಶದ ಈಡೇರಿಕೆಯಲ್ಲಿ ಯಾವುದೇ ರಾಜಿ ಮಾಡಿಕೊಂಡಿರುವುದಿಲ್ಲ.

ಇಲಾಖೆಯು ತನ್ನದೇ ಆದ ತರಬೇತಿ ಸಂಸ್ಥೆಯನ್ನು ಹೊಂದಿದೆ. ಇದು ಕೈಗಾರಿಕಾ ಸುರಕ್ಷತೆ, ಆರೋಗ್ಯ ಮತ್ತು ಕೆಲಸದ ಪರಿಸರದ ಕುರಿತು ಕಾರ್ಮಿಕರಿಗೆ ಜಾಗೃತಿ ಮೂಡಿಸಿ ಅಪಘಾತಗಳನ್ನು ನಿಯಂತ್ರಿಸುವ ಉದ್ದೇಶದಿಂದ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತದೆ. ಸಂಸ್ಥೆಯು ಕಾರ್ಖಾನೆಯ ಆವರಣದಲ್ಲಿಯೇ ಷಾಪ್ ಫ್ಲೋರ್, ಮೇಲ್ವಿಚಾರಣಾ ಮತ್ತು ನಿರ್ವಹಣಾ ಮಟ್ಟದ ಸಿಬ್ಬಂದಿಗಳಿಗೆ ಅವರ ಅಗತ್ಯದ ಆಧಾರದ ಮೇಲೆ ವಿವಿಧ ಮಾಡ್ಯೂಲ್‌ಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ನಡೆಸುತ್ತದೆ.

ಕಾರ್ಖಾನೆಯ ಆಡಳಿತದ ಹಿರಿಯ ಅಧಿಕಾರಿಗಳಿಗೆ ಸುರಕ್ಷತೆ, ಆರೋಗ್ಯ ಮತ್ತು ವ್ಯಕ್ತಿತ್ವ ವಿಕಸನ ಇತ್ಯಾದಿ ವಿಷಯಗಳ ಕುರಿತು ಕಾರ್ಯಾಗಾರಗಳು/ವಿಚಾರಗೋಷ್ಠಿಗಳನ್ನು ನಡೆಸುತ್ತದೆ. ಸುರಕ್ಷತಾ ಅಧಿಕಾರಿಗಳು, ಕಲ್ಯಾಣ, ಸಿಬ್ಬಂದಿ ಮತ್ತು ವೈದ್ಯಕೀಯ ಅಧಿಕಾರಿಗಳು ತಮ್ಮ ಪಾತ್ರ ಮತ್ತು ಜವಾಬ್ದಾರಿಗಳ ಬಗ್ಗೆ ಅರಿತು ಕೆಲಸ ಮಾಡುವ ಕಾರ್ಮಿಕರ ಹಿತಾಸಕ್ತಿಗಳನ್ನು ಕಾಪಾಡುವ ನಿಟ್ಟಿನಲ್ಲಿ ಕೆಲಸ ನಿರ್ವಹಿಸಲು ಈ ಸಂಸ್ಥೆಯ ತರಬೇತಿ ನೀಡುವ ಮೂಕ ಕೆಲಸ ಮಾಡುತ್ತಿದೆ.

ಕರ್ನಾಟಕ ರಾಜ್ಯದಲ್ಲಿ 17,251 ಕಾರ್ಖಾನೆಗಳು ಕಾರ್ಖಾನೆ ಕಾಯ್ದೆಯಡಿಯಲ್ಲಿ ನೋಂದಣಿಯಾಗಿದ್ದು, ಇದರಲ್ಲಿ ಸುಮಾರು 17,27,691 ಕಾರ್ಮಿಕರು ಕೆಲಸ ನಿರ್ವಹಿಸುತ್ತಿರುತ್ತಾರೆ. ಇದರಲ್ಲಿ ಆಟೋಮೊಬೈಲ್, ರಾಸಾಯನಿಕ, ಆಹಾರ ಉತ್ಪನ್ನಗಳು, ಎಲೆಕ್ಟ್ರಾನಿಕ್ಸ್, ಸಿಮೆಂಟ್ ಮತ್ತು ಎಂಜಿನಿಯರಿಂಗ್ ಘಟಕಗಳಿಂದ ಹಿಡಿದು ಎಲ್ಲಾ ವಿಧದ ಕಾರ್ಖಾನೆಗಳು ಒಳಗೊಂಡಿರುತ್ತದೆ. ರಾಜ್ಯದಲ್ಲಿ ಭಾರತೀಯ ಬಾಯ್ಲರ್ ಕಾಯ್ದೆಯಡಿಯಲ್ಲಿ ನೋಂದಣಿಯಾಗಿ ಕಾರ್ಯನಿರ್ವಹಿಸುತ್ತಿರುವ ಸುಮಾರು 3,040 ಬಾಯ್ಲರುಗಳಿವೆ.

**ಇಲಾಖೆಯು ಜಾರಿಗೊಳಿಸುತ್ತಿರುವ ಮುಖ್ಯ ಶಾಸನಗಳು:**

- ಕಾರ್ಖಾನೆಗಳ ಕಾಯ್ದೆ, 1948;
- ವೇತನ ಪಾವತಿ ಕಾಯ್ದೆ, 1936;
- ಪ್ರಸೂತಿ ಸೌಲಭ್ಯ ಕಾಯ್ದೆ, 1961;
- ಭಾರತೀಯ ಬಾಯ್ಲರ್ ಕಾಯ್ದೆ, 1923;
- ಮಕ್ಕಳ ಮತ್ತು ಕಿಶೋರಿ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986;
- ಪರಿಸರ (ಸಂರಕ್ಷಣೆ) ಕಾಯ್ದೆ, 1986 ಭಾಗಶಃ; ಮತ್ತು ಅದರಡಿಯಲ್ಲಿ ರೂಪಿಸಲಾಗಿರುವ ನಿಯಮಗಳು